


## 1

ರವಿಕಾಂತನ ಹೊಟ್ಟೆಯಲ್ಲಿದ್ದ ಕ್ಯಾಂಟೀನಿನ ಅರೆಬೆಂದ ಇಡ್ಲಿ ತಳಮಳವೆಬ್ಬಿಸಿತ್ತು. ದಾವಣಗೆರೆ ಬಿಟ್ಟಿದ್ದ ಕೆಎಸ್‌ಆರ್‌ಟಿಸಿ ಬಸ್ಸು ದುರ್ಗದ ನಾತಮಯ ಬಸ್‌ಸ್ಟ್ಯಾಂಡು ತಲುಪುವ ಹೊತ್ತಿಗೆ, ಈವರೆಗೆ ಪಕ್ಕವೇ ಕೂತಿದ್ದ ಅಷ್ಟಾವಕ್ರ ಹೆಂಗಸೊಬ್ಬಳು ವಯಕ್ಕನೆ ಕಕ್ಕಿಕೊಂಡು, ಅದು ಅವನ ಪ್ಯಾಂಟಿಗಿಷ್ಟು ಸಿಡಿದು, ವಾಕರಿಕೆ ತರಿಸಿ, ಏನೂ ಮಾಡಲಾಗದ ಸಿಟ್ಟಿನಲ್ಲಿ ಬಸ್ಸಿಳಿದು ನಿಲ್ಲುವ ಹೊತ್ತಿಗೆ ಬಂಡೆಗಲ್ಲಿನೂರಿನ ಸೂರ್ಯ ಅರ್ಧಬೋಳಾದ ನೆತ್ತಿಯ ಮೇಲೆ ಸೆಟೆದು ನಿಂತಿದ್ದ. ಉಳಿದಿದ್ದ ರಾತ್ರಿಯ ಎಗ್‌ರೈಸಿನೊಳಗೆ ಜಿರಳೆಯೊಂದು ಪವಡಿಸಿದ್ದೇ ಹಸಿವಿನ ಜೊತೆ ವಾಕರಿಕೆಯೂ ಮೂಡಿ, ಜೇಬಿಗೂ ನಾಲಗೆಗೂ ಮೋಸವಾಗುವಂತಹ ಇಡ್ಲಿ ತಿನ್ನುವಂತೆ ಮಾಡಿತ್ತು. ಹೊದೆಯುವ ಅಂಟುರಗ್ಗು ಎಷ್ಟೇ ಗಬ್ಬುನಾತ ಹೊಡೆದರೂ ತೊಳೆಯಲೊಪ್ಪದ ಈ ಮೊಬೈಲ್ ಮೆಕ್ಯಾನಿಕ್ಕು